

ಗೊತ್ತಾ ಹೇಳಿ? ಅವನು ನಕ್ಸಲೈಟ್ ಗುಂಪಿನ ಸಂಪರ್ಕ ಹೊಂದಿದವನಂತೆ, ಆಗಾಗ ಅವನು ಊರಿನಲ್ಲಿ ಕಾಣೆಯಾದಾಗೆಲ್ಲ ಕಾಡಿಗೆ ಹೋಗಿ ಬಂದೂಕು ಅಭ್ಯಾಸ ಮಾಡಿ ಬರುತ್ತಾನಂತೆ. ಮುಂದೆ ಅವನು ಕಾಡಿಗೆ ಹೋಗಿ ಅವರೊಂದಿಗೆ ಸೇರಿದರೆ ಆಶ್ಚರ್ಯವಿಲ್ಲ... ಹೀಗೆ ಏನೇನೋ ಮಾತುಗಳು ಇಡೀ ದಿನ ಕಾಲೇಜಿನ ತುಂಬೆಲ್ಲ ತುಂಬಿಕೊಂಡವು. ಅಂಜಲಿ ಮಾತ್ರ ಏನೆಂದರೆ ಏನನ್ನೂ ಹೇಳಲಿಲ್ಲ. ಮನೋಹರ ಬರುತ್ತಾನೆ ಎಂದಷ್ಟೇ ನಂಬಿ ಇಡೀ ದಿನ ಕಾಯುತ್ತಿದ್ದಳು.

ದಿನಗಳುರುಳಿ ವಾರಗಳು ಕಳೆದು ತಿಂಗಳಾದರೂ ಮನೋಹರ ಮಾತ್ರ ಬರಲಿಲ್ಲ. ಪರೀಕ್ಷೆಗಳು ಸರಾಗವಾಗಿ ನಡೆದುಹೋದವು. ಪೊಲೀಸರು ಕಾಲೇಜಿಗೆ ಆಗಾಗ ಬಂದು ಮನೋಹರನನ್ನು ಹುಡುಕುವುದು, ಗುಪ್ತವಾಗಿ ವಿಚಾರಿಸುವುದು, ಅವನ ರೂಮಿನಲ್ಲಿ ಅವನು ಓದುತ್ತಿದ್ದ ಪುಸ್ತಕಗಳನ್ನು ಹುಡುಕುವುದು, ಹಾಳೆಗಳನ್ನು ಮಗುಚುವುದು ನಡೆದೇ ಇತ್ತು. ಆದರೆ ಮನೋಹರನ ಸುಳಿವು ಮಾತ್ರ ಸಿಗಲೇ ಇಲ್ಲ. ಎಲ್ಲಿ ಹೋಗ್ತಾನೆ ಊರಲ್ಲಿ ಏನಾದರೂ ಜನರಿಗೆ ತೊಂದರೆಯಾಗುವ ಗದ್ದಲ ಎದ್ದರೆ ತಾನೇ ಬರುತ್ತಾನೆ ಎಂದು ಕಾಲೇಜಿನ ಸಿಬ್ಬಂದಿ ಊಟದ ಸಮಯದಲ್ಲಿ ಜೋಕು ಹಾರಿಸಿಕೊಳ್ಳುತ್ತಿದ್ದರೆ, ಹುಡುಗರು ಕಾಲೇಜಿನಲ್ಲಿ ಯಾವುದೇ ತಕರಾರುಗಳು ಎದ್ದರೂ ದನಿ ತಗ್ಗಿಸಿ ನಿಧಾನವಾಗಿ ಸಮಸ್ಯೆಗೆ ಹೊಂದಿಕೊಳ್ಳಲು ಅನುವಾಗತೊಡಗಿದರು.

ಸರ್ಕಾರದ ಜನವಿರೋಧಿ ನೀತಿನಿಯಮಗಳ ಎದುರು ನಿಲ್ಲುವುದಕ್ಕೆ ಬೇಕಾದ ಬೌದ್ಧಿಕ ಶಕ್ತಿಯಿಲ್ಲದೆ ಪರದಾಡುವವರು ಕತ್ತಲಲ್ಲಿ ಕೈ ಹಿಸುಕಿಕೊಳ್ಳುತ್ತಿದ್ದರೆ, ಏನಾದರೂ ಸರಿ ಇದನ್ನು ತಡೆಗಟ್ಟಬೇಕು ಎನ್ನುವವರ ದನಿಯೂ ಅದೇ ಕತ್ತಲಲ್ಲಿ ಕ್ರಮೇಣ ಕರಗಿ ಹೋಗುತ್ತಿತ್ತು. ‘ಕಾಲೇಜುಗಳಲ್ಲಿ ರಾಜಕೀಯವನ್ನು ಮಾತನಾಡಬಾರದು ವಿದ್ಯಾರ್ಥಿಗಳು ಓದಿನ ಕಡೆ ಗಮನ ಹರಿಸುತ್ತಾ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು